# ಕ.ವಿ.ಪ್ರ.ನಿ.ನಿ. ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್

# KPTCL AND ESCOMs PENSION AND GRATUITY TRUSTS

Ph No. 080-22291150
Fax No. 080-22223558
E-mail: pgtrustkptcl@gmail.com

6 ನೇ ಮಹಡಿ,
ಕಾವೇರಿ ಭವನ,
ಬೆಂಗಳೂರು-560 009.


ವಿಷಯ: ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ನ ಸಿಬ್ಬಂದಿ ಮತ್ತು ಆಡಳಿತಾತ್ಮಕ ವೆಚ್ಚಗಳನ್ನು ಭರಿಸುವ ಕುರಿತು.

ಉಲ್ಲೇಖ:
1. ದಿನಾಂಕ 30.09.2011ರಂದು ನಡೆದ 24ನೇ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಯ ನಡವಳಿ ಸಂಖ್ಯೆ. ಕೆಇಪಿಜಿಟಿ/ಪಿ11/2011-12 ಸಿವೈಎಸ್-01 ದಿನಾಂಕ 14.10.2011.
2. ದಿನಾಂಕ 30.09.2011ರಂದು ನಡೆದ 24ನೇ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಯ ನಡವಳಿ ಸಂಖ್ಯೆ. ಕೆಇಪಿಜಿಟಿ/ಪಿಜಿ11/2012-13 ಸಿವೈಎಸ್-17 ದಿನಾಂಕ 29.06.2012.
3. ನಿಯಂತ್ರಣಾಧಿಕಾರಿ(ಕಾ & ತೆ), ಕವಿಪ್ರನಿನಿರವರ ಟಿಪ್ಪಣಿ ದಿನಂಕ 05.01.2021.
4. ದಿನಾಂಕ 28.06.2021ರಂದು ನಡೆದ 46ನೇ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಯ ನಡವಳಿ ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿಜಿ11/2021-22/ಸಿವೈಎಸ್-09 ದಿನಾಂಕ 12.07.2021.

**********

**ಪೀಠಿಕೆ:**

1. **ದಿನಾಂಕ 30.09.2011ರಂದು ನಡೆದ 24ನೇ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಯ ನಡವಳಿ ಸಂಖ್ಯೆ 8.2ರಲ್ಲಿ ಟ್ರಸ್ಟ್‌ನ ವೆಚ್ಚ ಕವಿಪ್ರನಿನಿ ಮತ್ತು ವಿಸಕಂಗಳು ಭರಿಸುವ ಕುರಿತು ಈ ಕೆಳಗಿನಂತೆ ನಿರ್ಣಯಿಸಲಾಗಿರುತ್ತದೆ.**

   8.2: Sharing of expenses of KEPGT by ESCOMs

   "At present, KPTCL alone is meeting the expenses of KEPGT. Board of Trustees reviewed that it would be more appropriate to share the expenses of KEPGT by ESCOMs also. A proposal in this behalf has already been referred vide Trust letter NO: 349-352 dated 12-09-2011 to KPTCL corporate office to take up the matter with all ESCOMs.
   In the meeting, Representative of ESCOMs have informed that ESCOMs are ready to share the expenses of KEPGT.

   After detailed discussion on the above, Board of Trustees decided to refer the matter to KPTCL to place it before the KPTCL's Board and ESCOM's Board so that sharing of expenses of KEPGT by ESCOMs could be implemented forthwith. Meanwhile Manager(Cash and Accounts) section of KPTCL, Corporate office to furnish year-wise expenditure details to the Trust".

2. ಮೇಲಿನ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ, ಯಾವುದೇ ರೀತಿಯ ಕ್ರಮ ಕೈಗೊಳ್ಳದೇ ಇರುವ ಹಿನ್ನೆಲೆಯಲ್ಲಿ, ಕವಿಪ್ರನಿನಿ ಮೇಲಿನ ಆರ್ಥಿಕ ಹೊರೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ ದಿನಾಂಕ 30.04.2012ರಂದು ನಡೆದ 26ನೇ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಯ ನಡವಳಿ ಸಂಖ್ಯೆ 9(ಉ)ನಲ್ಲಿ ಟ್ರಸ್ಟ್‌ನ ವೆಚ್ಚ ಕವಿಪ್ರನಿನಿ ಮತ್ತು ವಿಸಕಂಗಳು ಭರಿಸುವ ಕುರಿತು ಈ ಕೆಳಗಿನಂತೆ ನಿರ್ಣಯಿಸಲಾಗಿರುತ್ತದೆ.

   "30.09.2011ರ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಯಲ್ಲಿ ವಿಸಕಂಗಳ ಎಲ್ಲ ಟ್ರಸ್ಟಿ/ಪ್ರತಿನಿಧಿಗಳು ಟ್ರಸ್ಟ್ ವೆಚ್ಚ ಭರಿಸುವುದಾಗಿ ಒಪ್ಪಿರುವ ಹಿನ್ನೆಲೆಯಲ್ಲಿ, ಕವಿಪ್ರನಿನಿಯ ವ್ಯವಸ್ಥಾಪಕರು(ನಗದು & ಲೆಕ್ಕಗಳು) ಶಾಖೆಯು ಟ್ರಸ್ಟ್ ವೆಚ್ಚವನ್ನು ಮರುಪಾವತಿಗಾಗಿ ಎಲ್ಲ ವಿಸಕಂಗಳಿಗೆ ತಿಳಿಸಿ ವಸೂಲು ಮಾಡಲು ಕ್ರಮ ಕೈಗೊಳ್ಳುವುದು. ಈ ಬಗ್ಗೆ ಆರ್ಥಿಕ ಸಲಹೆಗಾರರು(ಲೆ & ಸಂ) ಕಛೇರಿಯ ವ್ಯವಸ್ಥಾಪಕರು(ನಗದು & ಲೆಕ್ಕಗಳು) ಶಾಖೆ ಅತೀ ಜರೂರು ಕ್ರಮ ಕೈಗೊಳ್ಳುವುದರ ಬಗ್ಗೆ ಸಭೆ ನಿರ್ಣಹಿಸಿತು".

3. ಈ ನಿರ್ಣಯದಂತೆ, ಆರ್ಥಿಕ ಸಲಹೆಗಾರರು (ಲೆ & ಸಂ), ಕವಿಪ್ರನಿನಿರವರ ಕಛೇರಿಯ ವ್ಯವಸ್ಥಾಪಕರು (ನಗದು & ಲೆಕ್ಕಗಳು) ಶಾಖೆಯು ಮರುಪಾವತಿ ಹುಂಡಿಗಳನ್ನು ಸಿದ್ಧಪಡಿಸಿ ವಿಸಕಂಗಳಿಂದ ವಸೂಲಿಗೆ ಕ್ರಮ ಕೈಗೊಳ್ಳುತ್ತಿದೆ.
4. ಮೇಲಿನಂತೆ ಟ್ರಸ್ಟ್‌ನ ವೆಚ್ಚಗಳನ್ನು ಭರಿಸುವ ಕುರಿತು ಆದೇಶ ಪ್ರತಿಯನ್ನು ಒದಗಿಸುವಂತೆ ವಿಸಕಂಗಳು ಕೋರುತ್ತಿರುವುದರಿಂದ ಉಲ್ಲೇಖ-3ರ ಟಿಪ್ಪಣಿಯಲ್ಲಿ ನಿಯಂತ್ರಣಾಧಿಕಾರಿ(ಕಾ & ತೆ), ಕವಿಪ್ರನಿನಿರವರು ಕವಿಪ್ರನಿನಿ ಮತ್ತು ವಿಸಕಂಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು/ನೌಕರರ ವೆಚ್ಚವನ್ನು ಸಿಬ್ಬಂದಿಗಳ ಸಂಖ್ಯೆಗಳ ಮೇಲಿನ ಅನುಪಾತದಂತೆ ಭರಿಸಲು ನಿಗಮದ ಆದೇಶ ಹೊರಡಿಸಲು ಕೋರಿರುತ್ತಾರೆ.

5. ದಿನಾಂಕ 28.06.2021ರಂದು ನಡೆದ 46ನೇ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಯ ನಡವಳಿ ವಿಷಯ ಸಂಖ್ಯೆ 11ರಲ್ಲಿ ಟ್ರಸ್ಟ್‌ನ ವೆಚ್ಚವನ್ನು ಕವಿಪ್ರನಿನಿ ಮತ್ತು ವಿಸಕಂಗಳು ಭರಿಸುವ ಕುರಿತು ಈ ಕೆಳಗಿನಂತೆ ನಿರ್ಣಯಿಸಲಾಗಿರುತ್ತದೆ.

> "ನಿಗಮದ ಆದೇಶ ದಿನಾಂಕ 07.04.2016ರಲ್ಲಿ ಕೆಇಎನ್‌ಡಿಸಿಪಿಎಸ್ ಘಟಕದ ನಿರ್ವಹಣೆಗೆ ತಗಲುವ ವೆಚ್ಚವನ್ನು ಸಿಬ್ಬಂದಿಗಳ ಸಂಖ್ಯೆಗಳ ಅನುಪಾತದಲ್ಲಿ ಭರಿಸಲು ಆದೇಶಿಸಿರುವಂತೆಯೇ ಕವಿಪ್ರನಿನಿ ಮತ್ತು ಎಲ್ಲ ವಿಸಕಂಗಳ ಅಧಿಕಾರಿ/ನೌಕರರ ಪಿಂಚಣಿ/ ಕುಟುಂಬ ಪಿಂಚಣಿ, ಪರಿವರ್ತಿತ ಪಿಂಚಣಿ ಮತ್ತು ಉಪದಾನ ಪಾವತಿಗೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸುತ್ತಿರುವುದರಿಂದ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ನ ಆಡಳಿತಾತ್ಮಕ ಮತ್ತು ಸಾಮಾನ್ಯ ವೆಚ್ಚವನ್ನು ಸಿಬ್ಬಂದಿಗಳ ಅನುಪಾತದಲ್ಲಿ ಭರಿಸಲು ಹಾಗೂ ಈ ಹಿಂದಿನ ಅವಧಿಯಲ್ಲಿ ಮರುಪಾವತಿ ಹುಂಡಿಯನ್ನು ಕಳುಹಿಸಿ ಪಾವತಿಗೆ ಕ್ರಮ ಕೈಗೊಂಡಿರುವುದನ್ನು ಅನುಸಮರ್ಥಿಸುವ ಆದೇಶ ಹೊರಡಿಸುವ ಕುರಿತು ಸಭೆಯಲ್ಲಿ ಮಂಡಿಸಲಾಗಿ, ಸಭೆಯು ಅನುಮೋದಿಸಿತು".

**ಆದ್ದರಿಂದ ಈ ಆದೇಶ,**

**ಆದೇಶ ಸಂಖ್ಯೆ. ಕೆಇಪಿಜಿಟಿ/ಪಿಜಿ11/2021-22/** Cys-10 **ದಿನಾಂಕ** 15 JUL 2021

ಪೀಠಿಕೆಯಲ್ಲಿ ತಿಳಿಸಿದ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಗಳಲ್ಲಿ ನಿರ್ಣಯಿಸಿದಂತೆ, ದಿನಾಂಕ 01.04.2021ರಿಂದ ಜಾರಿಗೆ ಬರುವಂತೆ ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗೆ ಸಂಬಂಧಿಸಿದ, ಸಿಬ್ಬಂದಿ ಮತ್ತು ಆಡಳಿತಾತ್ಮಕ ವೆಚ್ಚಗಳನ್ನು ಕವಿಪ್ರನಿನಿ ಮತ್ತು ವಿಸಕಂಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಸಂಖ್ಯೆಗಳ ಮೇಲಿನ ಅನುಪಾತದಂತೆ ಕವಿಪ್ರನಿನಿ ಮತ್ತು ವಿಸಕಂಗಳು ಭರಿಸುವಂತೆ ಆದೇಶಿಸಿದೆ.

ಮುಂದುವರೆದು, ದಿನಾಂಕ 01.04.2021ರ ಹಿಂದಿನ ಅವಧಿಗೆ ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗೆ ಸಂಬಂಧಿಸಿದ, ಸಿಬ್ಬಂದಿ ಮತ್ತು ಆಡಳಿತಾತ್ಮಕ ವೆಚ್ಚಗಳನ್ನು ಭರಿಸುವುದಕ್ಕೋಸ್ಕರ ವಿಸಕಂಗಳಿಗೆ ಮರುಪಾವತಿಗಾಗಿ ಹುಂಡಿಗಳನ್ನು ಈಗಾಗಲೇ ಕಳುಹಿಸಿದ ಕವಿಪ್ರನಿನಿಯ ಕ್ರಮವನ್ನು ಅನುಸಮರ್ಥಿಸಿದೆ.

ಆರ್ಥಿಕ ಸಲಹೆಗಾರರು & ವ್ಯವಸ್ಥಾಪಕ ಟ್ರಸ್ಟಿ
ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್

| |
|---|
| ಅಧ್ಯಕ್ಷರು (ಪಿಂ & ಉ ಟ್ರಸ್ಟ್) ಮತ್ತು ನಿರ್ದೇಶಕರು(ಹಣಕಾಸು), ಕವಿಪ್ರನಿನಿರವರಿಂದ ಅನುಮೋದಿಸಲ್ಪಟ್ಟಿದೆ |

ಪ್ರತಿಗಳು:
1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂ
3. ನಿರ್ದೇಶಕರು(ಹಣಕಾಸು), ಬೆವಿಕಂ, ಕೆ.ಆರ್.ವೃತ್ತ, ಬೆಂಗಳೂರು.
4. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.ಎಸ್ಕಾಂ
5. ನಿರ್ದೇಶಕರು(ವಾಣಿಜ್ಯ), ಪಿಸಿಕೆಎಲ್.
6. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂ
7. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)/(ಆ.ಮತ್ತು ಮಾ.ಸಂ)ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂ.

ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.com..>eprasarana ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.
1. ಎಲ್ಲಾ ಅಧೀಕ್ಷಕ ಇಂಜಿನಿಯರ್/ನಿಯಂತ್ರಣಾಧಿಕಾರಿ, ಎಲ್ಲಾ ಕವಿಪ್ರನಿನಿ/ಎಸ್ಕಾಂ
2. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್/ಉಪ ಲೆಕ್ಕನಿಯಂತ್ರಣಾಧಿಕಾರಿ, ಎಲ್ಲ ಕವಿಪ್ರನಿನಿ ಎಸ್ಕಾಂ
3. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ಎಲ್ಲಾ ಲೆಕ್ಕಾಧಿಕಾರಿಗಳು/ಲೆಕ್ಕಾಧಿಕಾರಿಗಳು(ಆಂ.ಪ),ಕವಿಪ್ರನಿನಿ,ಎಸ್ಕಾಂ
4. ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಪ್ರತಿಗಳು ಮಾಹಿತಿಗಾಗಿ:
1. ಶ್ರೀ ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿನಿ ನೌಕರರ ಸಂಘ & ಕವಿಪ್ರನಿನಿ/ಬೆಸ್ಕಾಂ/ಮೆಸ್ಕಾಂ/ಗೆಸ್ಕಾಂ.ಚಾವಿಸನಿನಿ,
2. ಶ್ರೀ ಟಿ.ಎಮ್. ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ನೌಕರರ ಸಂಘ, ಬೆಂಗಳೂರು
4. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಇಂಜಿನಿಯರುಗಳ ಸಂಘ, ಬೆಂಗಳೂರು
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮ ಇಂಜಿನಿಯರುಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.